# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪೆನಿ ಗುರುತಿನ ಸಂಖ್ಯೆ: (ಸಿಐಎನ್)ಯು40109ಕೆಎ2002ಎಸ್.ಜಿಸಿ030425

ಕಂಪೆನಿಯ ಅಧಿಕೃತ ಕಛೇರಿ: ಆಡಳಿತ ಕಛೇರಿ :'ಮೆಸ್ಕಾಂ ಭವನ' ಕಾವೂರು ಅಡ್ಡ ರಸ್ತೆ, ಬಿಜೈ,

ಅಂಚೆ ಪೆಟ್ಟಿಗೆ ಸಂಖ್ಯೆ: 1130, ಮಂಗಳೂರು-575004

ಇ-ಮೇಲ್:cru.mescom@gmail.com

ದೂರವಾಣಿ ಸಂಖ್ಯೆ:0824-2885761

ಅಂತರ್ಜಾಲ: www.mescom.karnataka.gov.in


ಸಂಖ್ಯೆ: MESCOM/COML/RA/3/2023-COML/ I/55070/2023 ದಿನಾಂಕ: 14.08.2023

## ಸುತ್ತೋಲೆ

ವಿಷಯ: **LT-5(a) & LT-(b) ಜಕಾತಿ ಪ್ರವರ್ಗದಲ್ಲಿ ಬರುವ,ಕೇಂದ್ರ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಮಾಣೀಕೃತಗೊಂಡಿರುವ ಅತೀ ಸಣ್ಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಬಳಸಿದ ವಿದ್ಯುತ್ ಬಳಕೆ ಶುಲ್ಕದಲ್ಲಿ ಪ್ರತೀ ಯೂನಿಟ್ ಗೆ 50 ಪೈಸೆ ರಿಯಾಯಿತಿ ನೀಡುವ ಬಗ್ಗೆ**

ಉಲ್ಲೇಖ:
1. ಮಾನ್ಯ ಕ.ವಿ.ನಿ. ಆಯೋಗದ ಜಕಾತಿ ಆದೇಶ 2022 ಮತ್ತು ಜಕಾತಿ ಆದೇಶ 2023
2. ಈ ಕಛೇರಿ ಪತ್ರ ಸಂಖ್ಯೆ I-16181/2022 ದಿನಾಂಕ 07.04.2023 ಮತ್ತು I-46131/2023 ದಿನಾಂಕ 15.05.2023
3. ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಬೆಂಗಳೂರು ಇವರ ಪತ್ರ ಸಂಖ್ಯೆKASSIA/2023/228 ದಿನಾಂಕ 31.07.2023

1. ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಜಕಾತಿ ಆದೇಶ-2022 ರಲ್ಲಿ LT-5(a) & LT-(b) ಜಕಾತಿ ಪ್ರವರ್ಗದಲ್ಲಿ ಬರುವ,ಕೇಂದ್ರ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಮಾಣೀಕೃತಗೊಂಡಿರುವ ಅತೀ ಸಣ್ಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ದಿನಾಂಕ 01.04.2022 ರಿಂದ ಅಥವಾ ನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಬಳಸಿದ ವಿದ್ಯುತ್‌ಗೆ ಬಳಕೆ ಶುಲ್ಕದಲ್ಲಿ ಪ್ರತೀ ಯೂನಿಟ್ ಗೆ 50 ಪೈಸೆ ರಿಯಾಯಿತಿ ನೀಡುವ ಬಗ್ಗೆ ಆದೇಶವಿರುತ್ತದೆ.ಅಂತಯೇ ಸದರಿ ಜಕಾತಿ ಆದೇಶ-2023 ರಲ್ಲಿ ಸದರಿ ರಿಯಾಯಿತಿಯನ್ನು ಮುಂದುವರಿಸಿ ಆದೇಶಿಸಲಾಗಿದೆ.
2. ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಜಕಾತಿ ಆದೇಶವನ್ನು ಯಥಾವತ್ತಾಗಿ ಜಾರಿಗೊಳಿಸುವ ಬಗ್ಗೆ ಉಲ್ಲೇಖ(2) ರ ಪತ್ರಗಳಲ್ಲಿ ಈಗಾಗಲೇ ತಿಳಿಸಲಾಗಿರುತ್ತದೆ.ಮೇಲಾಗಿ, ಜಕಾತಿ ಪುಸ್ತಕ 2023 ಮತ್ತು ಜಕಾತಿ ಪುಸ್ತಕ 2024 ರಲ್ಲಿ LT-5 ಜಕಾತಿಯ ದರ ಸೂಚಿ ಕೋಷ್ಠಕದ ಟಿಪ್ಪಣಿಯಲ್ಲಿ ಸಹಾ ಈ ಬಗ್ಗೆ ನಮೂದಿಸಲಾಗಿರುತ್ತದೆ.
3. ರಿಯಾಯಿತಿ ಅನ್ವಯಿಸುವ ಅವಧಿಯಲ್ಲಿ ಸ್ಥಾಪನವು ಕೇಂದ್ರ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಮಾಣೀಕೃತಗೊಂಡಿರುವ ಬಗ್ಗೆ Udyog Adhaar/Udyam Registration Certificate ನ್ನು ಪಡೆದು ನೋಂದಣಿಯನ್ನು ಮತ್ತು ಸ್ಥಾಪನವು MICRO/SAMLL ಘಟಕವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕಾಗಿರುತ್ತದೆ.
4. ಆದಾಗ್ಯೂ ಸಹಾ ಈ ಮೇಲೆ ತಿಳಿಸಿದಂತೆ ರಿಯಾಯಿತಿಯನ್ನು ನೀಡದಿರುವ ಬಗ್ಗೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಬೆಂಗಳೂರು ಇವರು ಉಲ್ಲೇಖ(3) ರಲ್ಲಿ ತಿಳಿಸಿ ಗೌರವಾನ್ವಿತ ಆಯೋಗದ ಆದೇಶದಲ್ಲಿನ ರಿಯಾಯಿತಿಯನ್ನು ನೀಡುವಂತೆ ಕೋರಿರುತ್ತಾರೆ.
5. ಈ ಹಿನ್ನೆಲೆಯಲ್ಲಿ, LT-5 ಜಕಾತಿಯ ಗ್ರಾಹಕರ ಕೋರಿಕೆಗಳನ್ನು ಪರಿಶೀಲಿಸಿ ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಜಕಾತಿ ಆದೇಶವನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಸೂಚಿಸಲಾಗಿದೆ.

ಅಧೀಕ್ಷಕ ಇಂಜಿನಿಯರ್ (ವಿ.)(ವಾಣಿಜ್ಯ),
ಮೆಸ್ಕಾಂ,ಮಂಗಳೂರು.

ಪ್ರತಿಗಳು

1. ಮುಖ್ಯ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವಲಯ, ಮೆಸ್ಕಾಂ, ಮಂಗಳೂರು / ಶಿವಮೊಗ್ಗ.
2. ನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವಲಯ, ಮೆಸ್ಕಾಂ, ಮಂಗಳೂರು / ಶಿವಮೊಗ್ಗ.
3. ನಿಯಂತ್ರಣಾಧಿಕಾರಿಗಳು (ಕಂ. & ಕಾ), ಕಾರ್ಪೊರೇಟ್ ಕಛೇರಿ, ಮೆಸ್ಕಾಂ, ಮಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವೃತ್ತ, ಮೆಸ್ಕಾಂ.
5. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವೃತ್ತ, ಮೆಸ್ಕಾಂ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವಿಭಾಗಗಳು, ಮೆಸ್ಕಾಂ.
7. ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಮಾಹಿತಿ ತಂತ್ರಜ್ಞಾನ, ಮೆಸ್ಕಾಂ, ಕಾರ್ಪೊರೇಟ್ ಕಛೇರಿ, ಮಂಗಳೂರು.
8. ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಇ.ಬಿ.ಸಿ/ಹೆಚ್.ವಿ.ಸಿ ಎಮ್. ಮೆಸ್ಕಾಂ, ಕಾರ್ಪೊರೇಟ್ ಕಛೇರಿ, ಮಂಗಳೂರು.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ಉಪವಿಭಾಗಗಳು, ಮೆಸ್ಕಾಂ.
10. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಪರಿಶೋಧನೆ), ಕಾರ್ಯ & ಪಾಲನಾ ವಿಭಾಗಗಳು, ಮೆಸ್ಕಾಂ.
11. ವ್ಯನಿ. / ತಾಂ.ನಿ. ಇವರ ಹಿರಿಯ ಆಪ್ತ ಕಾರ್ಯದರ್ಶಿಗಳು,
12. ಮು.ಆ.ಅ. / ಆಸ(ಆಂ.ಪ.) ಇವರ ಆಪ್ತ ಕಾರ್ಯದರ್ಶಿಗಳು,
13. ಎಲ್ಲಾ ಶಾಖಾಧಿಕಾರಿಗಳು, ಕಾರ್ಯ & ಪಾಲನಾ ಶಾಖೆಗಳು, ಮೆಸ್ಕಾಂ.
14. ಮೆ॥ ಝ್ಯುಗಾಕ್ಸ್ ಇನ್ಫೋಟೆಕ್ ಪ್ರೈ.ಲಿ., #8, 1ನೇ ಕ್ರಾಸ್, 2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು-560038
15. ಅಧ್ಯಕ್ಷರು, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, #2/106,17 ನೇ ಅಡ್ಡ ರಸ್ತೆ,ಮಾಗಡಿ ಚೋರ್ಡ್ ರಸ್ತೆ, ವಿಜಯನಗರ,ಬೆಂಗಳೂರು-560040
16. ಮುಖ್ಯ ಕಡತ